<u>ಕರ್ನಾಟಕ ವಿಧಾನ ಪರಿಷತ್ತು</u>

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 623 (64)**
**ಮಾನ್ಯ ಸದಸ್ಯರ ಹೆಸರು : ಶ್ರೀ ಎಸ್. ವ್ಹಿ. ಸಂಕನೂರ (ಪದವೀಧರರ ಕ್ಷೇತ್ರ)**
**ಉತ್ತರಿಸುವ ದಿನಾಂಕ : 20.02.2024**
**ಉತ್ತರಿಸುವ ಸಚಿವರು : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು**

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಹುಬ್ಬಳ್ಳಿಯಲ್ಲಿ ಸ್ಥಾಪಿತವಾಗಿರುವ ಇನ್ಫೋಸಿಸ್ ಘಟಕಕ್ಕೆ KIADB ಇಂದ ಯಾವ ವರ್ಷ, ಎಷ್ಟು ಜಾಗ ಹಾಗೂ ಯಾವ ದರದಲ್ಲಿ ನೀಡಲಾಗಿದೆ; (ವಿವರವಾದ ಮಾಹಿತಿ ನೀಡುವುದು) | ಸರ್ಕಾರದ ಆದೇಶ ಸಂ:ಸಿಐ 357 ಎಸ್.ಪಿ.ಐ 2012 ದಿನಾಂಕ: 02-11-2012 ರನ್ವಯ ಮೆ:ಇನ್ಫೋಸಿಸ್ ಲಿಮಿಟೆಡ್ ಸಂಸ್ಥೆಯವರ IT SEZ Project ಯೋಜನೆಗೆ ಹುಬ್ಬಳ್ಳಿ ವಿಮಾನ ನಿಲ್ದಾಣದ ಹತ್ತಿರ ಗೋಕುಲ ಗ್ರಾಮದಲ್ಲಿ 50 ಎಕರೆ ಜಮೀನನ್ನು ಕೆಐಎಡಿಬಿಯಿಂದ ತಾತ್ಕಾಲಿಕ ಹಂಚಿಕೆ ದರ ಪ್ರತಿ ಎಕರೆಗೆ ರೂ.50 ಲಕ್ಷದಂತೆ 10 ವರ್ಷಗಳ ಗುತ್ತಿಗೆ ಮತ್ತು ಮಾರಾಟ ಆಧಾರದ ಮೇಲೆ ದಿನಾಂಕ:11-02-2013 ರಂದು ಹಂಚಿಕೆ ಮಾಡಲಾಗಿರುತ್ತದೆ.<br><br>ಸದರಿ ಕಂಪನಿಯು ಮಂಡಳಿಗೆ ತಾತ್ಕಾಲಿಕ ಹಂಚಿಕೆ ದರದ ಒಟ್ಟಾರೆ ಮೊತ್ತ ಪಾವತಿಸಿದ ನಂತರ ದಿನಾಂಕ:15-02-2013 ರಂದು ಸ್ವಾಧೀನ ಪತ್ರ ನೀಡಲಾಗಿದೆ. ದಿನಾಂಕ:19-09-2013 ರಂದು 10 ವರ್ಷಗಳ ಅವಧಿಗೆ ಗುತ್ತಿಗೆ ಮತ್ತು ಮಾರಾಟ ಕರಾರು ಪತ್ರ ನೆರವೇರಿಸಲಾಗಿದೆ.<br><br>ಮುಂದುವರೆದು, ಹಂಚಿಕೆಯಾದ ಜಮೀನಿನ ಪೈಕಿ ಆಶ್ರಯ ಹೌಸಿಂಗ್ ಕಾಲೋನಿ ರವರಿಗೆ ಸೇರಿದ 4.05 ಎಕರೆ ಜಮೀನನ್ನು ಹೊರತುಪಡಿಸಿ, ದಿನಾಂಕ:22-05-2014 ರಂದು ಲಭ್ಯವಿದ್ದ 43.05 ಎಕರೆ ಜಮೀನಿಗೆ ಪರಿಷ್ಕೃತ ಸ್ವಾಧೀನ ಪತ್ರ ನೀಡಿ, ದಿನಾಂಕ:02-06-2014 ಮತ್ತು 28-06-2014ರಂದು ಪರಿಷ್ಕೃತ ಜಮೀನಿಗೆ ತಿದ್ದುಪಡಿ ಕರಾರು ಪತ್ರ ನೆರವೇರಿಸಲಾಗಿದೆ.<br><br>ಸದರಿ ಕಂಪನಿಯವರಿಗೆ ಹಂಚಿಕೆಯಾಗಿರುವ ಜಮೀನನ್ನು ಮರು ಸರ್ವೆ ಮಾಡಿಸಿ, ಗಡಿ ಗುರುತಿಸಿ ಎಲ್ಲಾ ಬ್ಲಾಕ್/ಸರ್ವೆ ನಂಬರ್ ಗಳಲ್ಲಿನ ಸರಿಯಾದ ವಿಸ್ತೀರ್ಣಗಳ ವಿವರಗಳನ್ನು ನಮೂದಿಸಿ ದಿನಾಂಕ:12-01-2015 ರಂದು ಮತ್ತೊಮ್ಮೆ 43.05 ಎಕರೆ ಜಮೀನಿಗೆ ಸ್ವಾಧೀನ ಪತ್ರ ನೀಡಲಾಗಿರುತ್ತದೆ.<br><br>ತದನಂತರ, ಗುತ್ತಿಗೆ ಅವಧಿ ಮತ್ತು ಯೋಜನಾ ಅನುಷ್ಠಾನದ ಅವಧಿಯನ್ನು ದಿನಾಂಕ:12-01-2015 ರಿಂದ ಅನ್ವಯವಾಗುವಂತೆ ಮೂಲ ಗುತ್ತಿಗೆಯನ್ನು ದಿನಾಂಕ:11-03-2015 ರಂದು ತಿದ್ದುಪಡಿ ಕರಾರು ಪತ್ರ ನೆರವೇರಿಸಲಾಗಿದೆ.<br><br>ಮುಂದುವರೆದು, ದಿನಾಂಕ:21-01-2016 ರಂದು ಸದರಿ ಜಮೀನಿನ ಸರಿಯಾದ ಬ್ಲಾಕ್/ಸರ್ವೆ ನಂಬರ್ ಗಳನ್ನು ನಮೂದಿಸಿ ತಿದ್ದುಪಡಿ ಕರಾರು ಪತ್ರ ನೆರವೇರಿಸಲಾಗಿದೆ. |
| ಆ. | ಇನ್ಫೋಸಿಸ್ ಘಟಕ ಹುಬ್ಬಳ್ಳಿ ಇದಕ್ಕೆ ಜಾಗ ಮಂಜೂರು ಮಾಡುವಾಗ ಸದರಿ ಸಂಸ್ಥೆಯ ಜೊತೆಗೆ ಯಾವುದಾದರೂ ಕರಾರು ಒಪ್ಪಂದಗಳನ್ನು ಮಾಡಿಕೊಳ್ಳಲಾಗಿದೆಯೆ; (ಸಂಪೂರ್ಣ ಮಾಹಿತಿ ಒದಗಿಸುವುದು) | |

| | | |
|---|---|---|
| ಇ | ಇನ್ಫೋಸಿಸ್ ಘಟಕವು ಸದ್ಯ ಪೂರ್ಣ ಪ್ರಮಾಣದಲ್ಲಿ ಒಪ್ಪಂದದ ಪ್ರಕಾರ ಕಾರ್ಯ ನಿರ್ವಹಿಸುತ್ತಿದೆಯೇ; (ಪೂರ್ಣ ವಿವರ ನೀಡುವುದು) | ಮೆ:ಇನ್ಫೋಸಿಸ್ ಲಿಮಿಟೆಡ್ ರವರು ಮಂಡಳಿಯೊಂದಿಗೆ ನೆರವೇರಿಸಿಕೊಂಡ ಗುತ್ತಿಗೆ ಮತ್ತು ಮಾರಾಟ ಕರಾರು ಪತ್ರ ಮತ್ತು ತಿದ್ದುಪಡಿ ಕರಾರು ಪತ್ರಗಳನ್ವಯ, ದಿನಾಂಕ:12-01-2015 ರಿಂದ ಅನ್ವಯವಾಗುವಂತೆ 2 ವರ್ಷಗಳ ಅವಧಿಯಲ್ಲಿ ಯೋಜನೆ ಅನುಷ್ಠಾನಗೊಳಿಸಲು ಕಾಲಾವಕಾಶವಿರುತ್ತದೆ.<br><br>ದಿನಾಂಕ:08-03-2017 ಮತ್ತು ದಿನಾಂಕ:20-01-2020 ರಂದು ಮೆ:ಇನ್ಫೋಸಿಸ್ ಲಿಮಿಟೆಡ್ ರವರಿಗೆ ಕಟ್ಟಡ ಕಾಮಗಾರಿ ಮುಕ್ತಾಯ ಪ್ರಮಾಣ ಪತ್ರ ನೀಡಲಾಗಿದೆ.<br><br>ಕಂಪನಿಯವರು ಒಟ್ಟು ಜಮೀನಿನ ಶೇ46.50 ರಷ್ಟು ಅಂದರೆ, 20 ಎಕರೆ ಜಮೀನಿನಲ್ಲಿ ರಸ್ತೆ, ಪಾರ್ಕಿಂಗ್, ಬಿಲ್ಡಿಂಗ್, ಫುಡ್ ಕೋರ್ಟ್, ಉದ್ಯೋಗಿ ಸೌಲಭ್ಯಗಳು, ಇತರೆಗಳು ಭೂಬಳಕೆ ಮಾಡಿ ಯೋಜನೆ ಅನುಷ್ಠಾನ ಮಾಡಿದ್ದು, ಕಂಪನಿಯು ಕಾರ್ಯಾಚರಣೆಯಲ್ಲಿದೆ.<br><br>ಇನ್ನೂ ಬಾಕಿ ಇರುವ 23 ಎಕರೆ ಜಮೀನನ್ನು ಮುಂಬರುವ ದಿನಗಳಲ್ಲಿ ಯೋಜನಾ ವಿಸ್ತರಣೆಗಾಗಿ ಮೀಸಲಿಟ್ಟಿರುತ್ತಾರೆ. |
| ಈ | ಉತ್ತರ ಕರ್ನಾಟಕದ ಜನತೆ ಇನ್ಫೋಸಿಸ್ ಘಟಕವು ನಿರೀಕ್ಷಿತ ಮಟ್ಟದಲ್ಲಿ ಕಾರ್ಯ ಮಾಡದೆ ಇರುವುದರಿಂದ ಈ ಭಾಗದ ತಾಂತ್ರಿಕ ಶಿಕ್ಷಣ ಪಡೆದ ವಿದ್ಯಾರ್ಥಿಗಳಿಗೆ ಉದ್ಯೋಗ ಒದಗಿಸುವಲ್ಲಿ ವಿಫಲವಾಗಿದೆ ಎಂಬ ದೂರುಗಳು ಕೇಳಿ ಬರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? (ವಿವರ ನೀಡುವುದು) | ಪ್ರಸ್ತುತ ಹುಬ್ಬಳ್ಳಿ ಇನ್ಫೋಸಿಸ್ ಘಟಕದಲ್ಲಿ 280 ಸಿಬ್ಬಂದಿಗಳು ಕ್ಯಾಂಪಸ್‌ನಲ್ಲಿ ಕಾರ್ಯ ನಿರ್ವಹಿಸುತ್ತಿದ್ದು ಹಾಗೂ ಗುತ್ತಿಗೆ ಆಧಾರದಲ್ಲಿ 122 ಜನರು ಕಾರ್ಯ ನಿರ್ವಹಿಸುತ್ತಿದ್ದಾರೆ. ಎಲ್ಲಾ ಸಿಬ್ಬಂದಿಗಳು ಕನ್ನಡಿಗರಾಗಿರುತ್ತಾರೆ.<br><br>ಸರ್ಕಾರದಿಂದ ಯೋಜನೆ ಅನುಮೋದನೆ ಪಡೆಯುವಾಗ 1,000 ಜನರಿಗೆ ಉದ್ಯೋಗವಕಾಶ ಕಲ್ಪಿಸಲಾಗುವುದೆಂದು ತಿಳಿಸಿರುತ್ತಾರೆ. ಆದರೆ, ಅಷ್ಟು ಸಂಖ್ಯೆಯ ಜನರಿಗೆ ಉದ್ಯೋಗ ನೀಡಿರುವುದಿಲ್ಲ. |

**ಸಂಖ್ಯೆ: ಸಿಐ 74 ಐಎಪಿ 2024**

**(ಎಂ.ಬಿ. ಪಾಟೀಲ)**
**ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ**
**ಮೂಲಸೌಲಭ್ಯ ಅಭಿವೃದ್ಧಿ ಸಚಿವರು.**